# ಪುರಂದರ ದಾಸರ ಕೀರ್ತನೆಗಳಲ್ಲಿನ ಸಾಮಾಜಿಕ ಪರಿಕಲ್ಪನೆ

# Purandara Dasara Keerthanagalli Samajika Parikalpane

***ಡಾ.ಭಾರತಿ ಟಿ.ಸಿ.**

*Dr.Bharathi.T.C. Associate Professor, Dept. of Kannada, Govt. First Grade College, Ayanur.

ಪುರಂದರದಾಸರು ಕೀರ್ತನೆಗಳಲ್ಲಿ ಭಕ್ತಿ, ಸಾಮಾಜಿಕ ವಿಳಂಬನೆ ಹಾಗೂ ಸಂಸಾರದ ಬೇಸರವನ್ನು ಹೊರಹಾಕಿದ್ದಾರೆ. ಇತ್ತೀಚಿನ ದಿನಗಳಲ್ಲಿ ಯಾರ ಸಹಾಯಕ್ಕೂ ಯಾರು ಕೈಜೋಡಿಸುವುದಿಲ್ಲ.ಯಾಕೆಂದರೆ ವ್ಯಕ್ತಿಯು ಒಂದೇ ರೀತಿ. ವ್ಯಕ್ತಿ ಹೇಗೆ ಕಾಲಕ್ಕೆ ತಕ್ಕಂತೆ ಬದಲಾಗುತ್ತಾನೋ ಹಾಗೆ ಪ್ರಕೃತಿಯು ಕೂಡ ಬದಲಾವಣೆಯನ್ನು ಕಾಣುತ್ತ ಹೋಗುತ್ತದೆ. ದಾಸರು ಅಥವಾ ಕೆಳ ಜಾತಿಯವರು ಮನೆಯ ಮುಂದೆ ಬಂದರೆ 'ಮಗು ಮಲಗಿದೆ ಎದ್ದರೆ ಅಳುತ್ತದೆ' ಎಂದು ಹಾಗೆಯೇ ಹಿಂದಕ್ಕೆ ಕಳುಹಿಸುತ್ತಾರೆ.ಮಾಡಿದಷ್ಟು ನೀಡು ಭಿಕ್ಷೆ ಎನ್ನುವ ಉಕ್ತಿಯಂತೆ ಆಗಿದೆ. ಎಂದು ದಾಸರ ಅಭಿಪ್ರಾಯ

ಬಹುಸರವತ್ತಾದ ಈ ಕೀರ್ತನೆಯಲ್ಲಿ ಪುರಂದರದಾಸರು ಮನುಷ್ಯ ಬದುಕಿನಲ್ಲಿ ಮಾಡಬೇಕಾದ ಸತ್ಕರ್ಮಗಳನ್ನು ನೆನಪಿಸುತ್ತಾರೆ.ಹಾಗಿಲ್ಲದಿರೇ ಇಂತಹ ಹೀನಚರಿತನ ಡಾಂಬಿಕತೆಯನ್ನು, ತೋರಿಕೆಯ ಆಚರಣೆಯನ್ನು ವಿಡಂಬಿಸುತ್ತಾರೆ.ತತ್ವ ರಹಿತವಾದ ಆಚರಣೆಗಳು ಎಂದಿಗೂ ನಿಷ್ಪ್ರಯೋಜಕ ಮೋಸ ಮಾಡುವ ಸುಳ್ಳಾಡುವ ಜನರನ್ನು ಪುರಂದರದಾಸರು ಕಟುವಾಗಿ ಟೀಕಿಸುತ್ತಾರೆ. ತತ್ವ ಮತ್ತು ಆಚರಣೆಗಳು ಯಾವ ಕಾಲಕ್ಕೂ ಅಭೇದವಾಗಿರತಕ್ಕದ್ದು. ಕಪಟ, ಕುತಂತ್ರ, ಹಿರಿಯರಲ್ಲಿ ಅಗೌರವ ಇತ್ಯಾದಿ ಗುಣಗಳ ಬೆಳೆಸಿಕೊಂಡು ಲೋಹದ ಕಣ್ಣಿಗೆ ಜಪ ತಪಗಳ ಉಪವಾಸಗಳ ಮಾಡುತ್ತಾ ಸೋಗಿನ ಮುಖವಾಡದ ಜನರನ್ನು ಹೀಗಳೆಯುತ್ತಾರೆ.ಬೇವನ್ನು ಬೆಲ್ಲದಲ್ಲಿಟ್ಟರೂ ತನ್ನ ಕಹಿತ್ವವನ್ನು ನೀಗಿಸಿಕೊಳ್ಳಲಾಗದು.ಹಾಗೆಯೇ ದುಷ್ಟರು ಶಿಷ್ಟರ ಸಂಗದಲ್ಲಿದ್ದರೂ ತಮ್ಮ ಕುಟಿಲತೆಯನ್ನು ಬಿಡಲಾರರು.ಇದಕ್ಕೆ ಪೂರಕವಾಗಿ ಕನಕದಾಸರು ಒಂದೆಡೆ ಹೇಳುತ್ತಾರೆ."ಮೋಸದಿ ಜೀವಿಯ ಘಾಸಿಯಗೈದುದು ಕಾಶಿಗೆ ಹೋದರೆ ಹೋದಿತೆ"ಎಂದು.

'ಆಚಾರವೇ ಸ್ವರ್ಗ ಅನುಚಾರವೇ ನರಕ' ಎನ್ನುವ ಗಾದೆ ಮಾತಿನಂತೆ ಹೇಳುವುದಾದರೆ 'ಮಾತು ಹಾಡಿದರು ಹೋಯಿತು ಮುತ್ತು ಹೊಡೆದರು ಹೋಯಿತು' ಎನ್ನುವ ವಚನದಂತೆ ನಮ್ಮ ನಾಲಿಗೆ ನಮ್ಮ ಬಗ್ಗೆ ಯೋಚಿಸಿ ಮಾತನಾಡದೆ ಸದಾ ಪರರನ್ನು ದೂಷಿಸಿ ಮಾತನಾಡುವ ಕಾರ್ಯದಲ್ಲಿ ತೊಡಗಿರುತ್ತಾರೆ. ಇದ್ದದು ಮಾತನಾಡದೆ ಇರದೇ ಇರುವ ಆದರೆ ಸುಳ್ಳನ್ನು ಆಡುವ ನಾಲಿಗೆ ಎಂದು ದಾಸರು ಹೇಳಿದ್ದಾರೆ. ಸದಾ ವ್ಯಕ್ತಿಯಾದವನು ಪರರ ಚಿಂತೆಯಲ್ಲಿಯೇ ತನ್ನ ಚಿಂತೆಯನ್ನು ಮರೆಯುತ್ತಾರೆ. ಪರರನ್ನು ನೆರೆಹೊರೆಯರನ್ನು ದೂಷಿಸುವ ಕಾರ್ಯ ವ್ಯಕ್ತಿಯದು.ಇತ್ತೀಚಿನ ' ಪರರ ನಿಂದಿಸದೆ ಉಂಡ ಅನ್ನ ಕರಗದು'ಎಂದು ವಿದ್ವಾಂಸರು ಅಭಿಪ್ರಾಯ ಪಟ್ಟಿದ್ದಾರೆ.

ದಾಸರ ಕಾಲದಲ್ಲಿ ಆತ್ಮಹತ್ಯೆಗಳ ಪ್ರಮಾಣ ಹೆಚ್ಚಾಗಿ ಕಂಡು ಬಂದಿರಬೇಕು ಹಾಗಾಗಿ ಈ ಮೇಲಿನ ಕೀರ್ತನೆಯನ್ನು ಹಾಡಿರಬೇಕು ಎಂದು ಹೇಳಬಹುದು. ವ್ಯಕ್ತಿ/ಮಾನವನು ಸಂಸಾರದ ಭಾರವನ್ನು ಹೊರಲಾರದೆ ತನ್ನ ಹತ್ಯೆಯನ್ನು ತಾನೇ ಮಾಡಿಕೊಳ್ಳುತ್ತಿದ್ದರು. ಹಾಗೆಯೇ ಆಧುನಿಕ ಕಾಲಘಟ್ಟದಲ್ಲಿ ರೈತರು, ಯುವಕರು, ಮಹಿಳೆಯರು ಯಾವುದೋ ಕಾರಣಕ್ಕೆ ನೇಣು, ವಿಷ, ಬಾವಿ ಈ ರೀತಿಯಾದ ಸಾಯುವ ಪ್ರಕರಣಗಳು ಹೆಚ್ಚು ಕಾಣಬಹುದು.

ಪುರಂದರದಾಸರು ಜೀವನದಲ್ಲಿ ಎಷ್ಟೇ ಕಷ್ಟ ಬಂದರೂ ಅದನ್ನು ಎದುರಿಸುವ ಶಕ್ತಿಯನ್ನು ಪಡೆಯಬೇಕು. ಜೀವನದಲ್ಲಿ ಕಷ್ಟ ನಷ್ಟ ಅನಿವಾರ್ಯ ಆದನ್ನು ಎದುರಿಸಿ ಜಯವನ್ನು ಸಾಧಿಸಬೇಕೆಂದಿದ್ದಾರೆ.

ಸಮಾಜದಲ್ಲಿ ಬೇರೆ ಬೇರೆ ಪ್ರಲೋಭನೆಗಳಿಗೆ ಒಳಗಾಗಿ ಜನರು ತಪ್ಪುವುದು; ಇವರ ಸಂಖ್ಯೆಯು ಹೆಚ್ಚುವುದೆಂದು ದಾಸರು ತಿಳಿದಿದ್ದರು. ಕೆಲವರು ಜಾಲಿ ಮರದಂತೆ ಮೂಲಾದ ಪರ್ಯಂತ ಮುಳ್ಳು ಕೂಡಿಪ್ಪಂತವರು.

ಆಧುನಿಕ ಜಗತ್ತಿನಲ್ಲಿ ಮನುಷ್ಯ ವರ್ತನೆ ಹಾಸನ ನಡೆತೆ ಜಾಲಿ ಮರದಂತೆ ಎನ್ನಬಹುದು. ಪುರಂದರ ದಾಸರು ನುಡಿದ ಈ ಹಾಡು ಮನುಷ್ಯ ಎಷ್ಟು ಸ್ವಾರ್ಥಿ ಎಂದು ಅವನ ಬಿನ್ನಾಣ ಮಾತಿನ ಮೂಲಕ ಮಾನವ ಬೇರೆಯವರನ್ನು ಬದುಕಲು ನೆರವಾಗುತ್ತಿಲ್ಲ."ನೀವು ಜೀವಿಸಿ ಇತರರನ್ನು ಜೀವಿಸಲು " ಆಡು ಮಾತಿನಲ್ಲಿ ಹೇಳಬಹುದು. ನಾವು ಬೇರೆಯವರಿಗೆ ಉಪಕಾರ ಮಾಡಿದರೆ ನಮಗೆ ಸಾಯುವ ಕಾಲಕ್ಕೆ ಉಪಕರಿಸಬಹುದು.

ಪುರಂದರ ದಾಸರ ಪ್ರಕಾರ ಸಮಾಜ ದಾರಿ ತಪ್ಪಿದಾಗ ನಿಂದಿಸಲೇಬೇಕೆಂದು ಅವರ ಶ್ರದ್ಧೆ. ಏಕೆಂದರೆ" ನಿಂದಕರಿರಬೇಕು ನಂದಿ ಇದ್ದರೆ ಕೇರಿ ಹೇಗೆ ಶುದ್ಧಿಯು ಹಾಗೆ" ಅದು ಅಲ್ಲದೆ ಸಮಾಜದಲ್ಲಿ ಯಾವ ಕಾಲದಲ್ಲಿಯೂ ಒಳ್ಳೆಯವರಷ್ಟೇ ಇದ್ದು ಕೆಟ್ಟ ಜನ ಇಲ್ಲದಿರುವುದು ಸಾಧ್ಯವಿಲ್ಲ. ಎಲ್ಲಾ ಕಾಲಗಳಲ್ಲಿಯೂ ಒಳ್ಳೆಯವರು ಇರುತ್ತಾರೆ.ಕೆಟ್ಟವರು ಇರುತ್ತಾರೆ.ಕೆಟ್ಟವರನ್ನು ಮಾರ್ಗದರ್ಶಿಗಳೆಂದು ಬಗೆಯ ಬಾರದು. ಅಷ್ಟೇ; ಅವರಿಂದ ಎಚ್ಚರಿಕೆಯನ್ನು "ದುಷ್ಟ ಜನರು ಈ ಸೃಷ್ಟಿಯೊಳಗೆ ಇದ್ದರೆ ಶಿಷ್ಟ ಜನರಿಗೆಲ್ಲ ಕೀರ್ತಿಗಳು ದುರುಳ ಜನಾಂಗಳು ಚಿರಕಾಲ ಇರುವಂತೆ ಕರವ ಮುಗಿದು ವರವ ಬೇಡುವೆನು" ಎಂದಿದ್ದಾರೆ ದಾಸರು. ಇಲ್ಲಿಯೂ ಅವರ ವಾಸ್ತವಿಕತೆ ಕಾಣುತ್ತದೆ. ಸಮಾಜವನ್ನೆಲ್ಲ ಶುದ್ಧಿಗೊಳಿಸುವುದು ಯಾವ ಸುಧಾರಕರಿಗೂ ಸಾಧ್ಯವಿಲ್ಲ. ಕೆಟ್ಟದ್ದನ್ನು ಒಳ್ಳೆಯ ಉಪಯೋಗಕ್ಕೆ ಬಳಸಿಕೊಳ್ಳುವುದು ಜಾಣತನ. ಸಮಾಜದಲ್ಲಿ ಬಡವರು-ಮೇಲುಜಾತಿ-ಕೀಳುಜಾತಿ, ಒಳ್ಳೆಯವರು-ಕೆಟ್ಟವರು ಮೊದಲಾದ ಭೇದವಿರುವುದು ನಮಗೆ ವಿಶಿಷ್ಟವಾದದೇನಲ್ಲ. ಎಲ್ಲಾ ಸಮಾಜಗಳಲ್ಲಿಯೂ ಎಲ್ಲಾ ಕಾಲಗಳಗೂ ಇದು ಇದ್ದದ್ದೇ. ದಾಸರ ಕಾಲದಲ್ಲಿ ಇದು ಸ್ಪಷ್ಟವಾಗಿಯೇ ಇದ್ದಿತು. ಏಕೆಂದರೆ ಅದು ಸುಭಿಕ್ಷದಿಂದ ದುರ್ಭಿಕ್ಷಕ್ಕೆ ಸಂಕ್ರಮಣವಾಗುತ್ತಿದ್ದ ಸಿರಿವಂತರು ದರಿದ್ರದನ್ನು ಕಂಡು ಹೀನಾಯ ಪಡುತ್ತಿದ್ದಿದ್ದೂ. ಮೇಲು ಜಾತಿಯವರನ್ನು ದಾಸರ ಹಾಡುಗಳಲ್ಲಿ ಮೇಲಿಂದ ಮೇಲೆ ಕಾಣಬರುತ್ತದೆ.

ಪುರಂದರದಾಸರು ಹುಚ್ಚಪ್ಪ ಗಳಂದ ಮಾತಿನಲ್ಲಿ ಆದರವಿದೆ, ವಾತ್ಸಲ್ಯವಿದೆ, ಮನುಷ್ಯನಿಗೆ ಹಿತವಾಗಬೇಕೆಂದು ಸತತವು ಚಿಂತಿಸುತ್ತಾ, ಅವನ ಹಿತದ ಆಗುಹೋಗುಗಳನ್ನೇ ನೆನೆಯುತ್ತಜನರ ನಡುವೆ ನಡೆಯುತ್ತದ್ದುದು ಪುರಂದರದಾಸರ ಒಂದು ಮುಖ. ಭಗವದ್ಭಕ್ತಿಯು ಅವನ ಬಾಳಿಗೆ ಬೆಳಕಾದರೆ ಜೀವನಶುದ್ಧಿಯು ಅವರ ನಡೆ ನುಡಿಯ ಉದ್ದೇಶವಾಗಿದ್ದಿತು.

ಮಾನವ ಜನ್ಮ ದೊಡ್ಡದು ಅದನ್ನು ಹಾನಿ ಮಾಡಿಕೊಳ್ಳಬೇಡಿ ಎಂದು ಹೆಣ್ಣು, ಹೊನ್ನು, ಮಣ್ಣು ಇವುಗಳ ತಾವಾಗಿಯೇ ಒಲಿದು ಬರಬೇಕು ಅದನ್ನು ನಾವು ಬಲವಂತವಾಗಿ ಪಡೆಯಬಾರದು. ಯಮನು ಬಂದು ತನ್ನ ದೇಹವನ್ನು ಕಾಲ ಹಿಡಿದುಕೊಂಡು ಎಳೆಯುವಾಗ ತಾಳು/ ನಿಲ್ಲು ನಿಲ್ಲೆಂದರೆ ಅವರು ನಿಲ್ಲುವರೇ ಎಂದು, ಇದು ಮನುಷ್ಯನ ಜೀವನದಲ್ಲಿ ಸತಿ-ಸುತರು ಕೊನೆಯವರೆಗೆ ಜೊತೆಯಾಗಿರುವರೇ? ನಿಮ್ಮ ಪಾಪವನ್ನು ಕಳೆದು ಸುಖಿಯಾಗಿರಬೇಕಾದರೆ ಶ್ರೀ ಪುರಂದರ ವಿಠಲನ ಬದಲಿಸಿ ಎಂದು ಪುರಂದರರು ಹಾಡಿದ್ದಾರೆ.

"ಸಜ್ಜನರ ಸಂಗ ಹೆಜ್ಜೇನು ಸವಿದಂತೆ, ದುಜ್ಜನರ ಸಂಗ ಹೆಜ್ಜೇನು ಕಡಿದಂತೆ" ಎನ್ನುವ ಗಾದೆ ಮಾತಿನಂತೆ ಪುರಂದರದಾಸರು ತಮ್ಮ ಕೀರ್ತನೆಯಲ್ಲಿ ಸಜ್ಜನರ ಸಂಗವ ಮಾಡಿ ವೇದ ಶಾಸ್ತ್ರವನ್ನು ಓದಿ ಧ್ಯಾನವ ಮಾಡಿ ಎಂದಿದ್ದಾರೆ.ಹಾಗೆಯೇ ಸಂಸಾರದಲ್ಲಿ ಇರುವ ಜಂಜಾಟವನ್ನು ದಾಸರು ಈ ರೀತಿಯಾಗಿ ವಿವರಿಸಿದ್ದಾರೆ.

ಸತಿಸುತರು ಯಾರು ಹಿತವರಲ್ಲ ಅವರನ್ನು ನೆಚ್ಚಿ ಬುದ್ದಿಗೆಟ್ಟು ತಿರುಗಬೇಡ. ಸತ್ತಾಗ ನಿನ್ನ ಹಿಂದೆ ಹೆಂಡತಿ ಮಕ್ಕಳು ಬರುವರೇನು? ಎಂದು ದಾಸರು ವಿನಂತಿಸಿದ್ದಾರೆ. ಹಾಗೆಯೇ ಹೀನ ಜನರ ಸಂಗವ ಮಾಡಿ ನಿನ್ನ ಜೀವನವನ್ನು ನೀನೆ ಹಾನಿ ಮಾಡಿಕೊಳ್ಳಬೇಡ ಎಂದು ಜನ ಸಮ್ಮುಖಕ್ಕೆ ಸಾರಿ ಹೇಳಿದ್ದಾರೆ.

ಪಂಥ ಪಗಡೆಯಾಡಿ ನೀನು ವ್ಯರ್ಥಕಾಲ ಕಳೆಯಬೇಡ ಮಹಾಭಾರತದಲ್ಲಿ ಬರುವ ಒಂದು ಸನ್ನಿವೇಶವನ್ನು ನಾವು ಕಾಣಬಹುದು. ಪಾಂಡವರು ಪಗಟೆಯಾಟದಲ್ಲಿ ತನ್ನೆಲ್ಲವರನ್ನು ಕಳೆದುಕೊಂಡದ್ದು ನಾವು ಮನಗಾಣಬಹುದು.

ಪುರಂದರದಾಸರು ಮಾನವ ಸಂಸಾರದ ಜಂಜಾಟದಿಂದ ಒದ್ದಾಡುತ್ತಿರುವುದನ್ನು ಕಂಡು ಈ ರೀತಿಯಾಗಿ ವಿಡಂಬಿಸಿದ್ದಾರೆ. ಮನುಷ್ಯ ಹುಟ್ಟುವಾಗ ಒಂಟಿ, ಸಾಯುವಾಗ ಒಂಟಿ, ಇದರ ಮಧ್ಯದಲ್ಲಿ ನಡೆಯುವ ಜೀವನದಲ್ಲಿ ಎಲ್ಲಾ ತನ್ನದೆಂದಿ ತನ್ನಿಂದ ದೂರಾಗುವ ಹೊತ್ತಿಗೆ ಅಳುಮಾರಿ ಮಾಡುತಿ ಎಲ್ಲವೂ ನನಗೆ, ಎಲ್ಲವೂ ನನ್ನದು ಎಂದು ತನ್ನ ಮಡದಿ ಮಗುವಿಗೆ ಮೀಸಲು ಎಂದು ಪುರಂದರರು ಹಾಡಿ ವಿಡಂಬಿಸಿದ್ದಾರೆ.

ಮಾನವನ ಜೀವನದಲ್ಲಿ ಸದಾ ನಡಿಯುತ್ತಿರುವ ಸಾಮಾಜಿಕ ವಿಚಾರಗಳೇ ಆಗಿವೆ.ಪುರಂದರದಾಸರು ಮನುಷ್ಯನ ಆಡಂಬರ ಮತ್ತು ಸಮಾಜ ಅವನನ್ನು ಕಾಣುವ ರೀತಿ ಹೇಗೆ ಎಂಬುದನ್ನು ಈ ಕೀರ್ತನೆಯಲ್ಲಿ ಹಾಡಿದ್ದಾರೆ.ಮನುಷ್ಯ ಇತ್ತೀಚಿನ ದಿನಗಳಲ್ಲಿ ತುಂಬಾ ಸ್ವಾರ್ಥಿಯಾಗಿದ್ದಾನೆ.ಈ ಸ್ವಾರ್ಥ ಜಗತ್ತಿನಲ್ಲಿ ಬರಿ ನೋವು,ಸಂಕಟ,ಹತಾಶೆ,ನಿರಾಶೆ ಇತ್ಯಾದಿಗಳೇ ಹೆಚ್ಚು ಎಂದು ಅರಿತು ೧೫ನೇ ಶತಮಾನದಲ್ಲಿಯೂ ಕೂಡ ಇತ್ತೆಂದು ಹೇಳಿದ್ದಾರೆ.ಇಲ್ಲಿ ಈ ಜಗತ್ತಿನಲ್ಲಿ "ಹಣಕ್ಕೆ ಇರುವ ಬೆಲೆ ಗುಣಕ್ಕಿಲ್ಲ"ಹೇಗೆಂದರೆ ಒಬ್ಬ ವ್ಯಕ್ತಿ ಜೀವನದಲ್ಲಿ ಸೋತು,ಕುಗ್ಗಿ,ಹಸಿದು ನೆಂಟರ ಮನೆಗೆ ಹೋದರೆ ಬಾ ಕುಳಿತುಕೋ ಊಟ ಮಾಡು ಎಂದು ಹೇಳುವವರ ಸಂಖ್ಯೆ ತೀರಾ ವಿರಳವಾಗಿಹೋಗಿದೆ."ಕೆಟ್ಟಾಗ ನೆಂಟರಿಲ್ಲ ಸತ್ತಾಗ ದೇವರಿಲ್ಲ"ಎನ್ನುವ ಮಾತಿನಂತಾಗಿದೆ ಈ ಸಮಾಜ.

ದಾಸರು ಸಮಾಜದಲ್ಲಿ ಬರುವ ಹೆಣ್ಣುಗಳ ಬಗ್ಗೆ ಈ ರೀತಿಯಾಗಿ ಹೇಳಿದ್ದಾರೆ." ಇಕ್ಕಲಾರದ ಕೈ ಎಂಜಲು ಚಿಕ್ಕ ಮಕ್ಕಳುಅಳುತ್ತಾರೆ ಹೋಗೋ ದಾಸಯ್ಯ" ಮನೆಯ ಬಾಗಿಲಿಗೆ ಬಂದ ದಾಸಯ್ಯನನ್ನು ಹೆಣ್ಣು ಮಕ್ಕಳು ನಾನಾ ರೀತಿಯಾಗಿ ಬೈದು ಕೊನೆಗೆ ನಿನ್ನ ಕಾಟ ಎಂಥದ್ದು ಎಂದು ಮಹಿಳೆಯರು ಕೊಂಕು ಆಡಿದ್ದಾರೆ. ಇಲ್ಲಿ ಮಹಿಳೆಯರು ದಾನವ ನೀಡದಿರುವುದಕ್ಕೆ ಕಾರಣವೆಂದರೆ ಹಿಂದಿನ ದಿನಗಳಲ್ಲಿ ಪರಪುರುಷರನ್ನು ನೋಡುವ ಪದ್ಧತಿ ಇರಲಿಲ್ಲವೆಂದು ಇನ್ನೊಂದು ಹೆಣ್ಣು ದಾನವ ನೀಡಲು ಇಷ್ಟೆಲ್ಲ ಹರಸಹಾಸ ಮಾಡಿರಬೇಕು. ಎಂದು ಹೇಳಬಹುದು" ಕುಣಿಯಲಾರದ ಹೆಣ್ಣು ನೆಲ ಡೊಂಕು ಎಂದಳಂತೆ" ಎನ್ನುವಂತಾಗಿದೆ.

ಪುರಂದರದಾಸರು ಒಂದೆಡೆ ದಾನವ ಕೇಳಲು ಹೋದಾಗ ಅಲ್ಲಿನ ಹೆಣ್ಣು ಮಕ್ಕಳು ಕೈ ಎಂಜಲು,ಪಾತ್ರೆ ತೊಳೆಯುತ್ತೇನೆ, ಚಿಕ್ಕ ಮಕ್ಕಳು ಅಳುತ್ತಾರೆ.ಎಂದು ನಾನಾರೀತಿಯಾಗಿ ದಾನವ ನೀಡದೆ ಹಂಗಿಸಿದ ಮಹಿಳೆಯರು, ಇನ್ನೊಂದು ಕಡೆ ದಾನವ

ಕೇಳಲು ಮನೆಯ ಬಾಗಿಲಿಗೆ ಬಂದರೆ ತೆರೆದ ಬಾಗಿಲನ್ನು ಮುಚ್ಚಿದಳು,ಅದನ್ನು ಕಂಡು ದಾಸರು ಈ ರೀತಿಯಾಗಿ ಹಾಡಿ ಹೇಳಿದ್ದಾರೆ. "ಕದವನಿಕ್ಕಿದಳೆದೇಕೊ ಗಯ್ಯಾಳಿ ಮೂಳಿ" ಎಂದು ಅಂದಿನ ಸಮಾಜದಲ್ಲಿ ನಡೆದ ರೀತಿಯನ್ನು ನೆನೆಯುತ್ತ ದಾಸರು ಹೆಣ್ಣು ಮಕ್ಕಳನ್ನು ಈ ಮೇಲಿನಂತೆ ಹೀಯ್ಯಾಳಿಸಿದ್ದಾರೆ.

ಪುರಂದರದಾಸರು ಮಾನವನನ್ನು ಹೀನ ನಾಯಿಗೆ ಹೋಲಿಸಿ ಹೇಳಿದ್ದಾರೆ. ಆದರೆ ನಾಯಿಗೆ ಇನ್ನೊಂದು ಹೆಸರು ನಿಯತ್ತು, ಅಂದಿನ ಕಾಲದಲ್ಲಿ ಅಂದರೆ ೧೫-೧೬ನೇ ಶತಮಾನದಲ್ಲಿ ಸಮಾಜದಲ್ಲಿ ನಡೆಯುವ ಹೀನ ಕೃತ್ಯಗಳ ಬಗ್ಗೆ ವಿಡಂಬಿಸಿದ್ದಾರೆ. ಸಮಾಜದಲ್ಲಿ ಮಾನವನನ್ನು ಕೊಟ್ಟ ಸಾಲವ ಕೊಡದೆ ಇರುವವನು ನಾಯ, ಕೊಟ್ಟ ಭಾಷೆಗೆ ತಪ್ಪುವ ನಾಯಿ, ಕೊಟ್ಟು ಕುದಿಯುವ ಕೆಟ್ಟ ನಾಯಿ,ಇಟ್ಟ ಅನ್ನವನ್ನು ಇಟ್ಟ ಹಂಗಿಸುವಂತಹ ನಾಯಿ,ಪುಟ್ಟ ಹುಡುಗಿಯ ಮೇಲೆ ಅತ್ಯಾಚಾರ ಮಾಡುವ ನಾಯಿ,ಮನೆಯ ಹೆಂಡತಿಯನ್ನು ಬಿಟ್ಟು ಬೇರೆ ಹೆಣ್ಣುಗಳನ್ನು ಆಳುವ ನಾಯಿ,ಎಂದು ನಾನಾ ರೀತಿಯಾಗಿ ವಿಡಂಬಿಸಿದ್ದಾರೆ.

ಪುರಂದರದಾಸರು ಈ ಮೇಲಿನ ಕೀರ್ತನೆಯಲ್ಲಿ ಯಾರನ್ನು ಯಾವುದೇ ಕಾರಣಕ್ಕೂ ನಿಂದಿಸಬಾರದು ಎಂದು ಹಾಡಿದ್ದಾರೆ. ಮಾನವ ಜಗತ್ತಿನಲ್ಲಿ ಬೇರೆಯವರನ್ನು ನಿಂದಿಸುವ ಕಾರ್ಯವನ್ನು ಕಂಡು ದಾಸರು ಈ ರೀತಿಯಾಗಿ ಹೇಳಿದ್ದಾರೆ.ರಾಮನನ್ನು ನಿಂದಿಸಿದ ರಾವಣ ಕೆಟ್ಟ, ಪಾಂಡವರನ್ನು ನಿಂದಿಸಿದ ಕೌರವ ತಮ್ಮ ಎಲ್ಲಾ ಭೂಮಿಯನ್ನು ಕಳೆದುಕೊಂಡು ಕೆಟ್ಟ, ಸೆರಗಿನಲ್ಲಿ ಬೆಂಕಿಯ ಕೆಂಡವನ್ನು ಕಟ್ಟಿಕೊಂಡರೆ ತನ್ನ ಒಡಲೆ ಸುಡುವುದೇ ಹೊರತು ಬೇರೆಯವರನ್ನು ಸುಡದು. ನಾವು ಆಡಿದ ನಿಂದನೆಯ ಮಾತುಗಳು ತಿರುಗುಬಾಣವಾಗಿ ನಮ್ಮನ್ನೇ ಅದು ಸುಡದೆ ಬಿಡಲಾರದು.ಎಂದು ದಾಸರು ತಮ್ಮ ಕೀರ್ತನೆಯಲ್ಲಿ ಹೇಳಿದ್ದಾರೆ.

ಹೊಲೆಯ ಬಂದನೆಂದು ಎಂಬ ಉಗಾಭೋಗದಲ್ಲಿ ಕೀರ್ತನೆಯಲ್ಲಿ ಹೇಳಿದ್ದನ್ನೇ ಅಡಕವಾಗಿ ಮೂರು ಮಾತುಗಳಲ್ಲಿ ಸಂಗ್ರಹಿಸಿದ್ದಾರೆ. ಹೊಲೆಯ ಹೊರಗಿಹನೆ ಹೊಲೆಯ ಬಂದನೆಂದು ಎಂಬ ಕೃತಿಗಳಲ್ಲಿ ಜಾತಿ ವ್ಯವಸ್ಥೆಯ ಬಗ್ಗೆ ದಾಸರಗಿದ್ದ ಅಸಹನೆ ಸ್ಪಷ್ಟವಾಗುತ್ತದೆ.ಮೊದಲ ಕೃತಿಯಲ್ಲಿ ಹೊಲೆತನ ಎಂಬುದು ಹುಟ್ಟಿನಿಂದಲ್ಲ, ಗುಣ ಕರ್ಮದಿಂದ ಅನೇಕ ಹೋಲಿಕೆಗಳಿಂದ ಹೀಗೆ ನಡೆದವರು ಹೊಲೆಯ ಎಂದು ಪುರಂದರದಾಸರು ಕೊಡುವ ಪಟ್ಟಿ ಅವರ ದೃಷ್ಟಿಯ ನೈತಿಕ ಮೌಲ್ಯಗಳನ್ನು ಸೂಚಿಸುತ್ತದೆ.

ಬಸವೇಶ್ವರರ'ಕೊಲ್ಲುವವನೇ ಮಾದಿಗ'ಎಂಬ ಪ್ರಸಿದ್ಧ ವಚನವು, ರಾಘವಾಂಕನ'ಅತಿ ಮುನಿವ ಯತಿ ಹೊಲೆಯ'ಎಂಬ ಮಾತು ಈ ಉಗಭೋಗವನ್ನು ಓದುವಾಗ ನೆನಪಾಗುತ್ತದೆ. ಆರೋಗ್ಯವಂತ ಮನಸ್ಸುಗಳು ಸಮಾಜದ ಹೊಲಸನ್ನು ತೊಳೆಯಲು ಹೊರಟಾಗ ಸಮಾಧಾನ ದಾಟಿಯ ವಿಚಾರಗಳನ್ನು ವ್ಯಕ್ತಪಡಿಸುವುದು ಅನಿವಾರ್ಯವೆಂಬಂತೆ ತೋರುವುದು.

ಮಧ್ಯಯುಗಿನ ಕಾಲದಲ್ಲಿ ಜನರ ಮೂಢನಂಬಿಕೆಗಳನ್ನು ದೂರ ಮಾಡುವ ಸಲುವಾಗಿ ಮತ್ತು ಅವರಲ್ಲಿದ್ದಂತಹ ತಾರತಮ್ಯತೆಯನ್ನು ಶರಣರು ವಚನಗಳನ್ನು ರಚನೆ ಮಾಡಿ ಅವರನ್ನು ಆ ಅಂಧಕಾರದಿಂದ ದೂರ ಮಾಡಲು ಸಾಕಷ್ಟು ಶ್ರಮಿಸಿದರು. ಶರಣರ ಗುಂಪೇ ಜನರ ಮೌಢ್ಯತೆಯನ್ನು ದೂರ ಮಾಡಲು ರಚನೆಯಾಯಿತು.

ಮನುಷ್ಯ ಕೇಂದ್ರಿತವಾದ ನೆಲೆಯಲ್ಲಿ ರಚಿತವಾಗಿರುವ ವಚನಗಳು ನಿಜವಾದ ಅರ್ಥದಲ್ಲಿ ಮಾನವನ ಸರ್ವತೋಮುಖ ವಿಕಸನದತ್ತ ತನ್ನ ಗಮನವನ್ನು ಕೇಂದ್ರಕರಿಸಿವೆ. ಸಮಾಜದಲ್ಲಿ ಬದುಕುವ ಜೀವಿ ನಡೆ-ನುಡಿಯಲ್ಲಿ ಹೊಂದಬೇಕಾಗಿರುವ ಸತ್ವವನ್ನು ಅಂತರಂಗದ ಪರಿಶುದ್ಧತೆಯನ್ನು ವಚನಕಾರರು ಮತ್ತೆ ಮತ್ತೆ ಬಲವಾಗಿ ಪ್ರತಿಪಾದಿಸಿದ್ದಾರೆ.ಅದೇ ರೀತಿಯಾಗಿ

ವಚನಕಾರರ ನಂತರ ದಾಸ ಸಾಹಿತ್ಯವು ಪ್ರಾರಂಭಗೊಂಡಿತು.ದಾಸ ಸಾಹಿತ್ಯದವರು ಕೈಯಲ್ಲಿ ತಂಬೂರಿಯಂತಹ ವಾದ್ಯಗಳನ್ನು ಹಿಡಿದುಕೊಂಡು ಬೀದಿ ಬೀದಿ ಸುತ್ತುತ್ತಾ ಜನರಿಗೆ ಅವರ ನೀತಿಯನ್ನು ತಿಳಸುತ್ತಿದ್ದರು. ವಚನಕಾರರು ವಚನಗಳನ್ನು ಬರಹ ರೂಪದಲ್ಲಷ್ಟೇ ರಚಿಸಿದದ್ದು ಕಂಡುಬರುತ್ತದೆ.ಆದರೆ ಕೀರ್ತನಾಕಾರರು ನೇರವಾಗಿ ಜನರಿಗೆ ತಿಳಸಲು ಪ್ರಯತ್ನಿಸುತ್ತಿದ್ದರು.

ಭಿಕ್ಷೆ ಬೇಡುತ್ತಲೇ ಅವರು ಜನರ ಮೌಢ್ಯತೆಯ ಬಗ್ಗೆ ತಿಳಸುತ್ತಿದ್ದರು.ಹೆಣ್ಣಿನ ಬಗ್ಗೆ,ಭಕ್ತಿಯ ಬಗ್ಗೆ,ಸಾಮಾಜಿಕ ಜೀವನದ ಬಗ್ಗೆ ಅವರು ತಿಳಸುತ್ತಿದ್ದರು. ಡಾಂಬಿಕತೆಯ ಬಗ್ಗೆಯೂ ಸಹ ತಿಳಸುತ್ತಿದ್ದರು. ಪುರುಷರಷ್ಟೇ ಅಲ್ಲದೆ ಮಹಿಳೆಯರು ಕೂಡ ವಚನಗಳನ್ನು ಮತ್ತು ಕೀರ್ತನೆಗಳನ್ನು ರಚಿಸುತ್ತಿದ್ದರು.

ನಾನು ಆಯ್ದುಕೊಂಡಿರುವ ಪುರಂದರ ದಾಸರ ಕೀರ್ತನೆಗಳನ್ನು ಸಾಮಾಜಿಕ ಪರಿಕಲ್ಪನೆ, ಪುರಂದರದಾಸರು ತಮ್ಮ ಕೀರ್ತನೆಗಳನ್ನು ಭಕ್ತಿಯ ಮಾರ್ಗದ ನೆಲೆಯಲ್ಲಿಯೇ ಮಹಿಳೆ, ಮೌಲ್ಯತೆ, ಸಾಮಾಜಿಕ ವಿಡಂಬನೆಯ ಬಗ್ಗೆ ಕುರಿತು ರಚಿಸಿದ್ದಾರೆ.

ಪುರಂದರದಾಸರು ತಮ್ಮ ಕೀರ್ತನೆಗಳನ್ನು ಅನುಭವದ ರೀತಿಯಲ್ಲಿ ರಚಿಸಿದ್ದಾರೆ.ಅನ್ಯರಿಗೆ ಭಕ್ತಿ ಭಾವದ ಬಗ್ಗೆ ಸಾಮಾಜಿಕ ಜೀವನದ ವಾಸ್ತು ವಾಸ್ತವಿಕತೆಯನ್ನು ಕಣ್ಣ ಮುಂದೆ ಇರಿಸಿದ್ದಾರೆ.ಇದರಿಂದ ನನಗೆ ತುಂಬಾ ಇಷ್ಟವಾಯಿತು ಹಾಗಾಗಿ ಇವರ ಬಗ್ಗೆ ಒಂದು ಕಿರು ಸಂಶೋಧನೆಯನ್ನು ರಚಿಸಲು ಈ ವಿಷಯವನ್ನು ಆಯ್ಕೆ ಮಾಡಿಕೊಂಡಿದ್ದೇನೆ.ಇವರ ಬರಹವೂ ತುಂಬಾ ಸರಳ ಮತ್ತು ಸೂಕ್ಷ್ಮವಾಗಿದ್ದವು ಜನರಿಗೆ ಬಹುಬೇಗನೆ ಅರ್ಥವಾಗುತ್ತಿದ್ದವು ಮಹಿಳೆ ಎಂದರೆ ಕೇವಲ ನಾಲ್ಕು ಗೋಡೆಗಳಗೆ ಸೀಮಿತವಾಗಿರದೆ ಇತರರಂತೆ ಅವರು ಕೂಡ ಎಂದು ಕೀರ್ತನೆಗಳನ್ನು ರಚಿಸಿದ್ದಾರೆ.

"ದಾಸರೆಂದರೆ ಪುರಂದರದಾಸರಯ್ಯ" ಎಂಬ ಮಾತಿನಂತೆ ಅಂದಿನ ಜನಜೀವನದಲಿದ್ದ ಅಂಧಕಾರದಲ್ಲಿ ಮುಳುಗಿದ್ದ ಜನರನ್ನು ಮೇಲೆತ್ತುವ ಸಲುವಾಗಿ ಕೀರ್ತನೆಗಳನ್ನು ರಚಿಸಿ ಕೀರ್ತನ ಕಾರರು ಪ್ರಸಿದ್ಧಿ ಪಡೆದಿದ್ದಾರೆ. ದಾಸರು ಕೀರ್ತನಗಳಲ್ಲಿ ಮಹಿಳೆಯರ ವರ್ತನೆ ಹಾಗೂ ಸ್ವಭಾವವನ್ನು ಕುರಿತು ತಮ್ಮ ಕೀರ್ತನಗಳನ್ನು ರಚಿಸಿದ್ದಾರೆ.ಒಂದು ಕಡೆ ಸ್ತ್ರೀಯನ್ನು ಕಡವನಿಕ್ಕಿದಳದೇಕೊ ಗಯ್ಯಾಳಿ ಮೂಳಿ ಎಂದು ತಮ್ಮ ಕಲ್ಪನೆಯನ್ನು ಹರಿಬಿಡುತ್ತಾರೆ.ಇನ್ನೊಂದು ಕಡೆ ರಾಗಿಯನ್ನು ಹಿಡಿದುಕೊಂಡು ನೀಡಲು ಬಂದಾಗ ದಾಸರು ರಾಗಿ ತಂದಿರ ಭಿಕ್ಷೆಗೆ ರಾಗಿ ತಂದಿರ ಎಂದು ತಮ್ಮ ಚಮತ್ಕೃತಿಯನ್ನು ತೋರಿಸುತ್ತಾರೆ.

**ಅಡಿ ಟಿಪ್ಪಣಿಗಳು**

೧.ಪ್ರೊ.ಎ.ವಿ. ನಾವಡ: ದಾಸಮಾರ್ಗ, ಪುಟ.೦೭
೨.ವಿ. ಎ.ದಿವಾಣಜಿ: ಪುರಂದರದಾಸರ–ಕೀರ್ತನೆ, ಪುಟ.೧೬
೩.ಮಿಂಚಿನಬಳ್ಳಿ ಕಾರ್ಯಾಲಯ: ಶ್ರೀ ಪುರಂದರ ದಾಸರು, ಪುಟ.೧೫
೪.ಬನ್ನಂಜೆ ಗೋವಿಂದಾಚಾರ್ಯ: ದಾಸಾಂಜಲಿ, ಪುಟ.೧೯೧